



ಇರಿಸಲಾಗಿದೆ. ಗರ್ಭಗುಡಿ ಸುತ್ತಲಿನ ನಾಲ್ಕು ದಿಕ್ಕುಗಳಿಗೂ ಕ್ರಮವಾಗಿ ಗಣೇಶ, ಶಿವ, ಕಾಳಿ, ಚಾಮುಂಡಿ ವಿಗ್ರಹಗಳಿವೆ. ಮುಂದೆ ಸುಂದರವಾದ ಗಣೇಶ ಮೂರ್ತಿಯಿದೆ. ಅದರ ಪಕ್ಕದಲ್ಲಿ ಅನೇಕ ಸಂಗೀತವಾದ್ಯಗಳನ್ನೂ, ಜೊತೆಗೆ ಅಲಂಕರಿಸಿದ ಪಲ್ಲಕಿಯನ್ನೂ ಇರಿಸಿದ್ದಾರೆ. ಪಲ್ಲಕ್ಕಿ ಹಬ್ಬ ಮತ್ತು ಜಾತ್ರೆಯ ಸಮಯಗಳಲ್ಲಿ ಮನುವಿನ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡಲಾಗುತ್ತದಂತೆ.

ಹಿಂದೂ ಪುರಾಣ ಕಥೆಗಳ ಪ್ರಕಾರ, ಮನು ಗೂಡಾರ್ಥವುಳ್ಳ ಋಷಿ. ಬ್ರಹ್ಮನ ಮಗ. ಸ್ವಯಂಭೂ ವೈದಿಕ. ಪ್ರತಿ ಕಲ್ಪವೂ 14 ಮನ್ವಂತರಗಳಿಂದ ಕೂಡಿದೆ. ಪ್ರತಿ ಮನ್ವಂತರವು ಮನುವಿನಿಂದ ಆಳಲ್ಪಟ್ಟಿದೆ. ಈಗ ಆಳಲಾಗುತ್ತಿರುವುದು 7ನೇ ಮನು– ವೈವಸ್ವತ ಮನು.

ವಿಷ್ಣು ಪುರಾಣದ ಪ್ರಕಾರ, ವೈವಸ್ವತ ಸತ್ಯವ್ರತ ದ್ರಾವಿಡ ರಾಜನಾಗಿ ಆಡಳಿತ ಮಾಡುತ್ತಿದ್ದಾಗ ದೊಡ್ಡ ಪ್ರಳಯ ಉಂಟಾಗಿ ಭೂಮಿ ತತ್ತರಿಸಿತ್ತು. ಆಗ ಮತ್ಸ್ಯಾವತಾರಿಯಾಗಿದ್ದ ವಿಷ್ಣು ಪ್ರವಾಹದಲ್ಲಿ ಮುಳುಗುತ್ತಿದ್ದ ವೇದಗಳನ್ನು, ವೈವಸ್ವತ ಮನುವನ್ನು ರಕ್ಷಿಸಿದ. ಜೊತೆಗೆ ಸಪ್ತಋಷಿಗಳಾದ ಅತ್ರಿ, ಕಾಶ್ಯಪ, ಗೌತಮ, ಜಮದಗ್ನಿ, ಭಾರದ್ವಾಜ, ವಶಿಷ್ಠ, ವಿಶ್ವಮಿತ್ರರನ್ನು ತಾನೇ ನಿರ್ಮಿಸಿದ ದೋಣಿಯಲ್ಲಿ ಸಾಗಿಸಿ ಹಿಮಾಲಯ ಪರ್ವತವನ್ನು ಲಂಗರಾಗಿ ಮಾಡಿ ವಾಸುಕಿಯನ್ನು ಹಗ್ಗವಾಗಿ ಕಟ್ಟಿ ರಕ್ಷಿಸಿದ. ಆಗ ಮನು ತನ್ನ ಜೊತೆಯಲ್ಲಿ ಸೃಷ್ಟಿ ಕ್ರಿಯೆಯ ಬೀಜವನ್ನು ಹೊತ್ತು ತಂದಿದ್ದನಂತೆ; ಅದರಿಂದ ಮನುಕುಲದ ಸೃಷ್ಟಿಯಾಯಿತು ಎಂಬುದು ಐತಿಹ್ಯ. ಪ್ರವಾಹದಿಂದ ರಕ್ಷಿಸಲ್ಪಟ್ಟ ಮನು ಹಿಮಾಚಲ ಪ್ರದೇಶದ ಹಿಮಾಲಯದ ತಪ್ಪಲಿನಲ್ಲಿ ನೆಲೆಸಿದನೆಂದೂ, ನೆಲಕ್ಕೆ ಕಾಲಿಟ್ಟ ಆರಂಭದಲ್ಲಿ ತಪಸ್ಸು ಮಾಡಿದ್ದು ಈ ಪ್ರಶಾಂತ ಪರಿಸರದಲ್ಲೇ ಎಂದೂ ಪ್ರತೀತಿ. ಹಾಗಾಗಿ ಮನುವಿನಿಂದಾಗಿಯೇ ಈ ಊರು ಮನಾಲಿಯಾಯಿತು.

ಮನು ಬರೆದ ಮನುಸ್ಮೃತಿ ಭವಿಷ್ಯದ ಧರ್ಮಶಾಸ್ತ್ರ ಗ್ರಂಥಗಳಿಗೆ ಮಾರ್ಗದರ್ಶಿಯಾಗಿದೆ. ಕಾಲ ಜ್ಞಾನಿಗಳಿಗೆ, ಆರುಷಿಗಳಿಗೆ, ಪ್ರಾರ್ಥನೆಗೆ ಸೇರಿದ ಭಕ್ತಾದಿಗಳಿಗೆ ಮತ್ತು ಪ್ರವಾಹದಲ್ಲಿ ರಕ್ಷಿಸಲ್ಪಟ್ಟವರಿಗೆ ಈತ ಮಾಡಿದ ಉಪನ್ಯಾಸಗಳು ಮನುಸ್ಮೃತಿಯಲ್ಲಿ ದಾಖಲಾಗಿದೆ. ಸುಮಾರು 10,000 ವರ್ಷಗಳ ಹಿಂದೆ ಆರ್ಯರ ಪ್ರದೇಶವಾದ ಬ್ರಹ್ಮಾವರ್ತದಲ್ಲಿ ಹೇಗೆ ಜನರು ಜೀವನ ನಡೆಸುತ್ತಿದ್ದರು; ಪ್ರಕೃತಿ ವಿಕೋಪಗಳಲ್ಲಿ ಹೇಗೆ ನಡೆದುಕೊಳ್ಳಬೇಕು; ತಮಗೇ ತಾವೇ ಹೇಗೆ ಮಾರ್ಗದರ್ಶಕರಾಗಬೇಕು ಹಾಗೂ ಸಮಾಜದ ವಿವಿಧ ವರ್ಗಗಳಿಗೆ ಹೇಗೆ ದಿಗ್ದರ್ಶಕರಾಗಬೇಕು ಎಂಬುದನ್ನು ಋಷಿ ಮನು, ಭೃಗು ಮಹರ್ಷಿಗಳ ಜೊತೆ ಸೇರಿ 2865 ಶ್ಲೋಕಗಳಲ್ಲಿ ವಿವರವಾಗಿ ತಿಳಿಸಿದ್ದಾನೆ.

ಆದರೆ ಮನಾಲಿಯಲ್ಲೇ ಮೊದಲ ಮನು ದೇವಾಲಯ ಸ್ಥಾಪನೆಯಾಯಿತು ಎನ್ನುವುದಕ್ಕೆ ಯಾವುದೇ ಐತಿಹಾಸಿಕ ಅಥವಾ ಪ್ರಾಚ್ಯವಸ್ತು ಇಲಾಖೆಯ ದಾಖಲೆಗಳಿಲ್ಲ. ಇಲ್ಲಿನ ಮೇಳಗಳಲ್ಲಿ ಒಂದು ಐತಿಹ್ಯವಿದೆ. 'ದೇವು ರ ಘರ್' (ದೇವರ ಮನೆ) ಎಂದು ಕರೆಸಿಕೊಳ್ಳುವ ಈ ಸ್ಥಳದಲ್ಲಿ ಮನೆಯ ಒಡತಿ ಒಂದು ಬೆಳಗಿನಲ್ಲಿ ಮನೆ ಮುಂದೆ ಸಗಣಿಯ ಜಾಗವನ್ನು ಅಗೆದು ಶುಚಿ ಗೊಳಿಸುತ್ತಿದ್ದಾಗ ಗುದ್ದಲಿಗೆ ಏನೋ ಸಿಕ್ಕಿ ಹಾಕಿ ಹಾಕಿಕೊಂಡಿತಂತೆ. ತೆಗೆದು ನೋಡಿದರೆ ಅದೊಂದು ದೇವತಾ ವಿಗ್ರಹ. ಗ್ರಾಮಸ್ಥರ ಸಮ್ಮುಖದಲ್ಲಿ ಜಾಗವನ್ನು ಮತ್ತಷ್ಟು ಅಗೆದಾಗ ಇನ್ನೂ ಅನೇಕ ವಿಗ್ರಹಗಳು ದೊರೆತವಂತೆ. ಅವುಗಳಿಗೆ ಮಂದಿರ ನಿರ್ಮಾಣ ಮಾಡಿ ಪೂಜಿಸಲಾಯಿತು ಎಂಬುದು ಐತಿಹ್ಯ.

ಈ ದೇವಾಲಯಕ್ಕೆ ಸಂಬಂಧಿಸಿ ಇನ್ನೂ ಅನೇಕ ಕಥೆಗಳಿವೆ. ಒಮ್ಮೆ ಮನು ಸಾಧು ವೇಷದಲ್ಲಿ ಮಂದಿರದ ಮುಂದೆ ಕಟ್ಟಿದ್ದ ಮಣಕದಿಂದ ಹಾಲು ಕರೆಯುವಂತೆ 'ದೇವು ರ ಘರ್' ಮುಂದೆ ನಿಂತು ಕೇಳುತ್ತಾನೆ. ಒಡತಿ ಅದು ಮಣಕನೆಂದೂ, ಹಾಲು ಕೊಡುವುದಿಲ್ಲವೆಂದೂ ಹೇಳಿದಳು. ಆದರೆ ಮನು ಬಲವಂತ ಮಾಡಿದ್ದರಿಂದ ಮನೆ ಒಡತಿ ಮಣಕನ ಕೆಚ್ಚಲನ್ನು ಹಿಂಡಿದಾಗ ಹಾಲು ಧಾರೆಯಾಗಿ ಬಂದಿತಂತೆ. ಮತ್ತೊಂದು ಕಥೆಯಂತೆ 'ದುಂಡು' ಎಂಬ ರಾಕ್ಷಸನ ಉಪಟಳದಿಂದ ಕಂಗಾಲಾಗಿದ್ದ ಅಲ್ಲಿನ ಜನರನ್ನು ಮನು ಶಾಂತಿಲ್ಯ ಋಷಿಯ ಸಹಾಯದಿಂದ ರಕ್ಷಿಸಿದ. ರಕ್ಕಸನ ಕಾಟದಿಂದ ಮುಕ್ತಿ ಹೊಂದಿದ ಸಂತಸಕ್ಕೆ ಇಂದಿಗೂ ಆ ದಿನವನ್ನು 'ದಿವಾಲಿ ಉತ್ಸವ' ಎಂದು ಆಚರಿಸುತ್ತಾರಂತೆ.

ಈ ಜಾತ್ರೆ ಸಾಂಸ್ಕೃತಿಕ ಮೇಳವಾಗಿ ಪರಿಣಮಿಸುತ್ತದೆ. ಮನಾಲಿಯಲ್ಲಿ ಮೇನಲ್ಲಿ ಜರುಗುವ ಮೇಳ ದೊಡ್ಡ ಊರ ಹಬ್ಬ. ಘುಂಗ್ರಿಯಲ್ಲಿನ ಹಿಡಿಂಬ ದೇವಿ, ನಾಡದೇವಿಯರನ್ನು ಮನು ಮಂದಿರದಲ್ಲಿ ಸೇರಿಸುತ್ತಾರೆ. ಶುಭಕರವಾದ ಈ ಹಬ್ಬದಲ್ಲಿ ಹಾಡು ಕುಣಿತ, ವಾದ್ಯ, ಆಟ, ಅನೇಕ ಮನರಂಜನಾ ಕಾರ್ಯಕ್ರಮಗಳು ಜರುಗುತ್ತವೆ. ಸುತ್ತಮುತ್ತಲಿನ ಎಲ್ಲ ಹಳ್ಳಿಗರು ಪಲ್ಲಕ್ಕಿ ಉತ್ಸವದಲ್ಲಿ ಭಾಗವಹಿಸಿ ಖುಷಿ ಪಡುತ್ತಾರೆ.

ಸಾಮಾನ್ಯವಾಗಿ ಸೆಪ್ಟೆಂಬರ್‌ನಿಂದ ಜೂನ್ ತಿಂಗಳವರೆಗೆ ಹಾಗೂ ನವೆಂಬರ್‌ನಿಂದ ಫೆಬ್ರುವರಿ ತಿಂಗಳವರೆಗೆ ಈ ಪ್ರದೇಶದಲ್ಲಿ ವಿಪರೀತ ಚಳಿಯಿದ್ದು, ಮಂಜು ಮುಸುಕಿದ ವಾತಾವರಣವಿರುತ್ತದೆ. ದೇವಾಲಯ ಬೆಳಿಗ್ಗೆ 6 ಗಂಟೆಗೆ ಬಾಗಿಲು ತೆರೆದರೆ, ಸೂರ್ಯಾಸ್ತದವರೆಗೆ ಇರುತ್ತದೆ. ■